ಸಿ. ಸಿ. ನಂ.- **286/2024**

ಸಿ.ಡಬ್ಲ್ಯೂ.- **10** / ಪಿ.ಡಬ್ಲ್ಯೂ.- **04**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ **21-08-2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ನಿಂಗಪ್ಪ |
| ತಂದೆಯ ಹೆಸರು - | ಗೋಪಾಲಪ್ಪ |
| ವಯಸ್ಸು - | **36** ವರ್ಷಗಳು |
| ಉದ್ಯೋಗ - | ಚಾಲಕ |
| ವಾಸಸ್ಥಳ - | ಚಪ್ಪರದಹಳ್ಳಿ ಗ್ರಾಮ, ಹೊಸಪೇಟೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ನನಗೆ ಮೃತ ಅಶ್ವಿನ್ ಕುಮಾರ ರವರ ಪರಿಚಯವಿಲ್ಲ. ನನಗೆ ಚಾಸಾ **11** ಮತ್ತು **12** ರವರ ಪರಿಚಯ ಸಹ ಇಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಪೊಲೀಸ್‌ರು ನನ್ನ ಸಹಿಯನ್ನು ಪಡೆದಿರುತ್ತಾರೆ. ಅಪಘಾತ ಹೇಗೆ ಆಯಿತು ಎಂದು ನಾನು ನೋಡಿಲ್ಲ. ನಾನು ಸ್ಥಳಕ್ಕೆ ಬರುವಷ್ಟರಲ್ಲಿ ಅಪಘಾತ ಆಗಿತ್ತು. ನಾನು ಹೋದಾಗ ಅಲ್ಲಿ ಒಂದು ಬೈಕ್, ಜನರು ಹಾಗೂ ಪೊಲೀಸ್‌ರು ಇದ್ದರು. ಅಪಘಾತ ಹೇಗೆ ಆಯಿತು ಎಂದು ನನಗೆ ಹೇಳಲಾಗುವುದಿಲ್ಲ. ಪೊಲೀಸ್‌ರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದಿಲ್ಲ. ಸ್ಥಳದಲ್ಲಿ ಇದ್ದ ಬೈಕ್‌ನ ನೊಂದಣಿ ನಂಬರನ್ನು ಅಲ್ಲಿ ಗಲಾಟೆ ಜಾಸ್ತಿ ಇದ್ದ ಕಾರಣ ನೋಡಲಾಗಲಿಲ್ಲ. ಘಟನಾ ಸ್ಥಳ ಹಂಪಿ ರಸ್ತೆಯಲ್ಲಿರುವ ಶ್ರೀಖರಿ ಶಾಲೆಯ ಹತ್ತಿರ ಇರುತ್ತದೆ. ಯಾವ ದಿನ ಅಪಘಾತ ಆಗಿದೆ ಎಂದು ಹೇಳಲಾಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಪ್ರಕರಣದ ವಾಸ್ತವಾಂಶ, ಅಭಿಯೋಜನೆಯ ದಾಖಲೆಗಳು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರೀಶಿಲಿಸಿ ಸಕಾರಣ ಕಂಡು ಬಂದಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀಸವಾಲು- ಮಾನ್ಯ ಎ. ಪಿ. ಪಿ. ಅವರಿಂದ-

ದಿಃ **27.12.2023** ರಂದು ನಾನು, ಚಾಸಾ **11** ಮತ್ತು **12** ರವರು ಮಾಲೇ ಧರಿಸಿದ್ದರಿಂದ ಪೂಜೆ ಮುಗಿಸಿಕೊಂಡು ಶ್ರೀಖರಿ ಕಾಲೇಜ್ ಹತ್ತಿರ ನಡೆದುಕೊಂಡು ಹೋಗುತ್ತಿದ್ದೆವು ಎಂದರೆ ಸರಿ.

ಆ ಸಮಯದಲ್ಲಿ ಕೊಂಡನಾಯ್ಕನಹಳ್ಳಿ ಕಡೆಯಿಂದ ಒಬ್ಬ ಮಾಲೇ ಧರಿಸಿದ ಸ್ವಾಮಿ ಹಾಗೂ ಅವರ ಹಿಂದೆ ಇನ್ನೊಬ್ಬ ವ್ಯಕ್ತಿ ಮೊ.ಸೈ ನಲ್ಲಿ ಹೋಗುತ್ತಿದ್ದರು ಎಂದರೆ ನಾನು ನೋಡಿಲ್ಲ. ಅದೇ ಸಮಯದಲ್ಲಿ ಹೊಸಪೇಟೆ ಕಡೆಯಿಂದ ಆರೋಪಿ ತನ್ನ ಹಿಂದೆ ಚಾಸಾ 9 ರವರನ್ನು ಕೂಡಿಸಿಕೊಂಡು ಅತೀವೇಗ ಮತ್ತು ಅಜಾಗರೂಕತೆಯಿಂದ ಮೊ.ಸೈ ನ್ನು ಚಲಾಯಿಸಿಕೊಂಡು ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಆರೋಪಿ ವೇಗವಾಗಿ ಮೊ.ಸೈ ಚಾಲನೆ ಮಾಡಿ ಮಾಲೇ ಧರಿಸಿದ ವ್ಯಕ್ತಿಯ ಮೊ.ಸೈ ಗೆ ಡಿಕ್ಕಿ ಹೊಡಸಿದ ಎಂದರೆ ಸಾಕ್ಷಿ ನಾನು ಹೋಗುವಷ್ಟರಲ್ಲಿ ಅಪಘಾತ ಆಗಿತ್ತು ಎಂದು ನುಡಿಯುತ್ತಾರೆ. ಇದರ ಪರಿಣಾಮವಾಗಿ ಎರಡು ಮೊ.ಸೈ ನ ಸವಾರರು ಹಾಗೂ ಹಿಂದೆ ಕುಂತವರು ಕೆಳಗೆ ಬಿದ್ದರು ಎಂದರೆ ನಾನು ನೋಡಿಲ್ಲ. ಆಗ ಗಾಯಾಳುಗಳನ್ನು ನಾನು, ಚಾಸಾ 11 ಮತ್ತು 12 ರವರು ಲೈಟ್ ನ ಬೆಳಕಿನಲ್ಲಿ ನೋಡಿ ಅವರಿಗೆ ಉಪಚರಿಸಿದೆವು ಎಂದರೆ ಸರಿಯಲ್ಲ. ಕೊಂಡನಾಯ್ಕನಹಳ್ಳಿ ಕಡೆಯಿಂದ ಬಂದ ಮೊ.ಸೈ ನಂಃ ಕೆಎ 35 ಇಬಿ 8689 ಆಗಿದ್ದು ಅದರ ಚಾಲಕನ ಹೆಸರು ಅಶ್ವಿನ್ ಕುಮಾರ ಎಂದು ನನಗೆ ತಿಳಿಯಿತು ಎಂದರೆ ಸರಿ. ಅವರ ತಲೆಯ ಹಿಂಭಾಗಕ್ಕೆ ಹಾಗೂ ಎಡಪಾದಕ್ಕೆ ರಕ್ತದ ಗಾಯವಾಗಿತ್ತು ಎಂದರೆ ಸಾಕ್ಷಿ ಅವರನ್ನು ನಾನು ಆಸ್ಪತ್ರೆಯಲ್ಲಿ ನೋಡಿದ್ದೆ ಎಂದು ನುಡಿಯುತ್ತಾರೆ. ಗಾಯಾಳುವಿನ ಹಿಂದೆ ಕುಂತಿದ ವ್ಯಕ್ತಿಯ ಹೆಸರು ಚನ್ನವೀರಪ್ಪ /ಚಾಸಾ 1 ಎಂದು ಸದರಿ ಚಾಸಾ 1 ರವರೇ ತಿಳಿಸಿದರು ಎಂದರೆ ಸರಿಯಲ್ಲ. ಆತನ ತಲೆಯ ಹಿಂಭಾಗ ಹಾಗೂ ಎಡಪಾದದ ಬಳಿ ಗಾಯ ಆಗಿತ್ತು ಎಂದರೆ ಅಲ್ಲಿ ಇದ್ದ ಜನರು ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಹೊಸಪೇಟೆ ಕಡೆಯಿಂದ ಬಂದ ಮೊ.ಸೈ ನಂಃ ಎಂಹೆಚ್ 45 ಎಕೆ 2474 ಆಗಿರುತ್ತದೆ ಎಂದರೆ ನಾನು ನೋಡಿಲ್ಲ. ಅದರ ಚಾಲಕನ ಹೆಸರು ಕೇಳಿದಾಗ ಅವರ ಹೆಸರು ವಿರೇಶ ಜಾದವ್ ಎಂದರೆ ನನಗೆ ಗೊತ್ತಿಲ್ಲ. ಆತನ ಬಲಗೈ ಮುಂಗೈಗೆ ರಕ್ತ ಗಾಯ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆತನ ಹೆಸರು ಸುನೀಲ್ ಬಾಬುನ್ ತ್ರಸಿ ಎಂದು ತಿಳಿಯಿತು ಎಂದರೆ ಸರಿಯಲ್ಲ. ಅವರಿಗೂ ಸಹ ಗಾಯ ಆಗಿತ್ತು ಎಂದರೆ ನಾನು ನೋಡಿಲ್ಲ. ಅಲ್ಲಿ ಎರಡು ಬೈಕ್ ಗಳು ಜಖಂ ಆಗಿದ್ದವು ಎಂದರೆ ಸರಿ. ಗಾಯಾಳುವನ್ನು ನಾವು ಆಟೋದಲ್ಲಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು ಎಂದರೆ ಸಾಕ್ಷಿ ಅಲ್ಲಿ ಇದ್ದ ಎಲ್ಲರೂ ಕಳುಹಿಸಿಕೊಟ್ಟೆವು ಎಂದು ನುಡಿಯುತ್ತಾರೆ. ಅಶ್ವಿನ್ ಕುಮಾರ ರವರು ಚಿಕಿತ್ಸೆ ಫಲಕಾರಿಯಾಗಿದೆ ಬಳ್ಳಾರಿ ವಿಮ್ಸ್ ಆಸ್ಪತ್ರೆಯಲ್ಲಿ ಮೃತ ಪಟ್ಟರು

ಸಿ. ಸಿ. ನಂ.- **286/2024**

ಸಿ.ಡಬ್ಲ್ಯೂ- **10** / ಪಿ.ಡಬ್ಲ್ಯೂ- **04**

ಎಂದರೆ ಸರಿ. ಈ ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದರೆ ಸಾಕ್ಷಿ ಅಲ್ಲಿ ಇದ್ದ ಜನರು ಹಾಗೇ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ನಾನು ಪೊಲೀಸ್‌ರಿಗೆ ಈ ರೀತಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಅಲ್ಲಗೆಳೆದ ಹೇಳಿಕೆಗಳನ್ನು ನಿಪಿ 7 ಎಂದು ಗುರುತಿಸಲಾಯಿತು.

ಆರೋಪಿತರ ಪರ ವಕೀಲರು ಪಾಟೀಸವಾಲು ಇಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.